ಅಧ್ಯಕ್ಷರು : ನೀವು ಮೊದಲು ಏನು ಪ್ರಶ್ನೆ ಕೇಳಿದ್ದೀರಿ ಅದಕ್ಕೆ ಸೀಮಿತವಾಗಿ ಮಾತ್ರ ಉಪ ಪ್ರಶ್ನೆ ಕೇಳಿ. ಇಲ್ಲದಿದ್ದರೆ, I will not allow you. I will go to next question.

ಶ್ರೀ ಎಂ.ಟಿ.ಕೃಷ್ಣಪ್ಪ : ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು. ಈ ಪ್ರಶ್ನೆ ಬಹಳ ಮೂಲಭೂತವಾದದ್ದು. ಆ fund ವಾಪಸ್ಸು ಹೊಗುತ್ತಿದೆ. You have not utilized that fund. ಆ fund utilize ಆಗಬೇಕು. ಅದು ವಾಪಸ್ಸು ಹೋಗುತ್ತಿದೆ.

ಅಧ್ಯಕ್ಷರು : ಒಂದೇ ಪ್ರಶ್ನೆಯಲ್ಲಿ ಎಲ್ಲವನ್ನೂ ಕೇಳುವುದಕ್ಕೆ ಅವಕಾಶವಿಲ್ಲ. ಬೇಕಾದರೆ ಬೇರೆ ಪ್ರಶ್ನೆ ಕಳುಹಿಸಿಕೊಡಿ.

ಶ್ರೀ ಎಂ.ಟಿ.ಕೃಷ್ಣಪ್ಪ : why are you wasting Government fund? You are not implementing.

ಪರಿಶಿಷ್ಟ ಪಂಗಡದ ಮೊರಾರ್ಜಿ ದೇಸಾಯಿ ವಸತಿಶಾಲೆ ಕಟ್ಟಡ ನಿರ್ಮಾಣ

8(124) ಶ್ರೀ ಹೆಚ್.ಎಸ್.ಮಹದೇವ ಪ್ರಸಾದ (ಗುಂಡ್ಲು ಪೇಟೆ)
ಶ್ರೀ ಡಿ.ಸುಧಾಕರ್ (ಸಮಾಜ ಕಲ್ಯಾಣ ಸಚಿವರು)

ಅ) ಗುಂಡ್ಲುಪೇಟೆ ಹಂಗಳ ಗ್ರಾಮದ ಪರಿಶಿಷ್ಟ ಪಂಗಡದ ಮೊರಾರ್ಜಿ ದೇಸಾಯಿ ವಸತಿ ನಿಲಯದ ಕಟ್ಟಡ ನಿರ್ಮಾಣಕ್ಕೆ ಸ್ಥಳೀಯರ ಬೇಡಿಕೆ ಇದೆಯೇ;

ಬೇಡಿಕೆ ಬಂದಿರುತ್ತದೆ.

ಆ) ಕಟ್ಟಡ ನಿರ್ಮಾಣಕ್ಕೆ ಅವಶ್ಯವಾದ ನಿವೇಶವನ್ನು ಇಲಾಖೆಗೆ ಹಸ್ತಾಂತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಶಾಲಾ ಸಂಕೀರ್ಣ ನಿರ್ಮಿಸಲು ಜಿಲ್ಲಾಧಿಕಾರಿ, ಚಾಮರಾಜನಗರ ಇವರು ದಿನಾಂಕ: 04-02-2009ರ ಆದೇಶದಂತೆ ಹಂಗಳ ಹೋಬಳಿ ಮಗುವಿನಹಳ್ಳಿ (ಮೇಲ್ಕಾಮನಹಳ್ಳಿ) ಗ್ರಾಮದಲ್ಲಿ 8 ಎಕರೆ ಜಮೀನನ್ನು ಮಂಜೂರು ಮಾಡಿರುತ್ತಾರೆ.

ಇ) ಹಾಗಿದ್ದಲ್ಲಿ, ಕಟ್ಟಡ ನಿರ್ಮಾಣದ ಕೆಲಸವನ್ನು 2009-10ನೇ ಸಾಲಿನಲ್ಲಿ ಕೈಗೊಳ್ಳಲು ಸರ್ಕಾರದ ತೀರ್ಮಾನವೇನು?

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ದಿನಾಂಕ: 01.07.2009 ರಂದು ಟೆಂಡರ್‌ನ್ನು ಕರೆಯಲಾಗಿದ್ದು, ಟೆಂಡರ್ ಸ್ವೀಕರಿಸಲು ದಿ:03.08.09 ಕೊನೆಯ ದಿನಾಂಕವಾಗಿರುತ್ತದೆ. ಟಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಅರ್ಹ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕಾರ್ಯದೇಶ ನೀಡಲಾಗುವುದು.

ಶ್ರೀ ಡಿ.ಕೆ. ಶಿವಕುಮಾರ್(ಕನಕಪುರ) : ಶ್ರೀ ಹೆಚ್.ಎಸ್.ಮಹದೇವಪ್ರಸಾದ್ (ಗುಂಡ್ಲುಪೇಟೆ) ಇವರ ಪರವಾಗಿ: ಮಾನ್ಯ ಅಧ್ಯಕ್ಷರೆ, ಕೆಲಸ ನಡೆಯುತ್ತಿದೆ ಎಂದು ಮಾನ್ಯ ಮಂತ್ರಿಗಳು ಉತ್ತರದಲ್ಲಿ ತಿಳಿಸಿದ್ದಾರೆ. ಮೊರಾರ್ಜಿ ದೇಸಾಯಿ ಶಾಲೆಗಳ sanction ಹಿಂದಿನ ಸರ್ಕಾರಗಳಿಂದ ಆಗಿದೆ. sanction ಆಗಿದ್ದರೂ ಸಹ ಯಾವ ಶಾಲೆಗೂ ಸ್ವಂತ building ಇಲ್ಲದೆ ಹಾಗೆಯೇ ಇವೆ. ಏಕೆಂದರೆ, ಭೂಮಿಯನ್ನು ಒದಗಿಸಿಕೊಡುವುದಕ್ಕೆ ಆಗುತ್ತಿಲ್ಲ. ಸರ್ಕಾರ ಈ ಮೊರಾರ್ಜಿ ದೇಸಾಯಿ ಶಾಲೆಗಳಿಗೆ ಭೂಮಿಯನ್ನು purchase ಮಾಡುವುದಕ್ಕೆ ಕಾರ್ಯಕ್ರಮವನ್ನೇನಾದರೂ ಹಮ್ಮಿಕೊಂಡಿದೆಯೇ? Building ಕಟ್ಟುವುದಕ್ಕೆ ಸರ್ಕಾರದಿಂದ 3 ಕೋಟಿ, 4 ಕೋಟಿ, 5 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೀರಿ. But, ಭೂಮಿ ಇಲ್ಲದೆ ಎಲ್ಲೂ ಕಟ್ಟುವುದಕ್ಕೆ ಆಗುತ್ತಿಲ್ಲ. ಸರ್ಕಾರದಲ್ಲಿ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಈ ಸಂಬಂಧ ಬೇಕಾದಷ್ಟು ಹಣ ಇದೆ. ಈ ಸಲುವಾಗಿ ಜಾಗವನ್ನು ಕೊಂಡುಕೊಂಡು ಸವರಿ ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕೆ ಕಾರ್ಯಕ್ರಮ ರೂಪಿಸಿಕೊಂಡಿದ್ದೀರೋ, ಇಲ್ಲವೋ ಎಂಬುದನ್ನು ತಿಳಿಸಬೇಕು. ಈ ಬಗ್ಗೆ ಏನಾದರೂ ಯೋಜನೆ ಇದೆಯೇ?

ಶ್ರೀ ಸುಧಾಕರ ಡಿ. : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರು ಕೇಳಿದ ಹಾಗೆ, ಈಗಾಗಲೇ ಈ ವರ್ಷ ಸುಮಾರು 106 ಕಡೆ ಮೊರಾರ್ಜಿ ದೇಸಾಯಿ ಶಾಲೆಗಳ ಕಟ್ಟಡದ ಸಲುವಾಗಿ tender ಅನ್ನು ಕರೆದಿದ್ದೇವೆ. ಮುಂದಿನ ತಿಂಗಳು 8ನೇ ತಾರೀಖಿಗೆ ಆ ಪ್ರಕ್ರಿಯೆ ಪೂರ್ಣವಾಗುತ್ತಿದೆ ಜೊತೆಗೆ, ಎಲ್ಲಿ ಸರ್ಕಾರದ ಜಾಗ ಸಿಗುವುದಿಲ್ಲ ಅದಕ್ಕೂ ಸಹ ಈ ಬಜೆಟ್‌ನಲ್ಲಿ ನಾವು provision ಮಾಡಿಕೊಂಡು private ನವರಿಂದ ಕಡಿಮೆ ಬೆಲೆಗೆ ಸಿಗುವ ಜಾಗವನ್ನು ತೆಗೆದುಕೊಳ್ಳಲಿಕ್ಕೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಡಿ.ಕೆ.ಶಿವಕುಮಾರ್ : ಈ ವರ್ಷದ ಬಜೆಟ್‌ನಲ್ಲಿ ಇದನ್ನು ಸೇರಿಸಿದ್ದೀರಾ?

ಶ್ರೀ ಸುಧಾಕರ ಡಿ. : ಹೌದು, ಸೇರಿಸಿದ್ದೇವೆ.

ಶ್ರೀ ಡಿ.ಕೆ.ಶಿವಕುಮಾರ್ : O.K. Thank you.